# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 138/23**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಡಾ.ಸಂತೋಷ್ ಎಂ.ಒ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಲೇಟ್ ಎಮ್ ಎನ್ ಒಂಕಾರ್ | | **19.06.2025** |
| ವಯಸ್ಸು | ಃ *38* ವರ್ಷ | | |
| ವೃತ್ತಿ | ಃ ವೈದ್ಯಾಧಿಕಾರಿಗಳು, ಡಿ.ಆರ್.ಎಂ ಆಸ್ಪತ್ರೆ , ಮೈಸೂರು | | **ಪ್ರಾ.ಸಾ. ಃ 3** |
| ವಾಸಸ್ಥಳ | ಃ ಮೈಸೂರು | | **ಚಾ.ಸಾ. ಃ 11** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು *2018* ನೇ ಇಸವಿಯಿಂದ ಮೈಸೂರಿನ ಡಿ.ಆರ್.ಎಂ. ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುತ್ತೇನೆ.

ದಿ.*01.11.2021* ರಂದು ಸಂಜೆ *05.30* ಗಂಟೆಗೆ ಚೈತ್ರಾ ಎಂಬುವವರನ್ನು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಅವರು ಪ್ರಜ್ಞಾವಸ್ಥೆಯಲ್ಲಿ ಇರಲಿಲ್ಲ. ಅವರನ್ನು ನವೀನ್ ಎಂಬುವವರು ಕರೆದುಕೊಂಡು ಬಂದಿದ್ದರು ಮತ್ತು ನವೀನ್ ರೋಗಿಯ ಸಹೋದರ ಅಂತ ಹೇಳಿದ್ದರು. ನವೀನ್ ರವರು ಚೈತ್ರಾ ರವರು ಇಲಿ ಪಾಷಣದ *2* ಮಾತ್ರೆ ಗಳನ್ನು ತೆಗೆದುಕೊಂಡಿರುತ್ತಾರೆ ಅಂತ ಹೇಳಿದ್ದರು ಮತ್ತು ಶ್ರೀರಂಗಪಟ್ಟಣದಲ್ಲಿ ಆ ಮಾತ್ರೆಗಳನ್ನು ತೆಗೆದುಕೊಂಡಿದ್ದರು ಅಂತ ಹೇಳಿದ್ದರು. ಮಾರ್ಗ ಮಧ್ಯದಲ್ಲಿ ಕೆ ಆರ್ ಆಸ್ಪತ್ರೆಗೆ ಹೋಗಿದ್ದ ಬಗ್ಗೆ

ತಿಳಿಸಿದ್ದರು . ಕೆ ಆರ್ ಆಸ್ಪತ್ರೆಯಲ್ಲಿ ರೋಗಿಯ ಹೊಟ್ಟೆ ಕ್ಲೀನ್ ಮಾಡಿದ್ದರ ಬಗ್ಗೆ ಹೇಳಿದ್ದರು ಮತ್ತು ಬಿ ಪಿ ತುಂಬಾ ಕಡಿಮೆ ಇದುದರಿಂದ ಇಂಜೆಕ್ಷನ್ ಕೊಟ್ಟಿದ್ದರು ಅಂತ ತಿಳಿಸಿದ್ದರು ಮತ್ತು ಕೆ ಆರ್ ಆಸ್ಪತ್ರೆಯ ಎಮ್ ಎಲ್ ಸಿ ಫಾರ್ರ೦ ನಲ್ಲಿ ಇಂಜೆಕ್ಷನ್ ಗಳನ್ನು ಕೊಟ್ಟ ಬಗ್ಗೆ ಉಲ್ಲೇಖಿಸಿತ್ತು ಮತ್ತು ಕೆ ಆರ್ ಆಸ್ಪತ್ರೆಯಲ್ಲಿ ಆ ರೋಗಿಯನ್ನು ಮ್ಯಾನೇಜ್ ಮಾಡಲು ಆಗುವುದಿಲ್ಲ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ತೋರಿಸಿರುವಂತೆ ತಿಳಿಸಿರುತ್ತಾರೆ ಅಂತ ರೋಗಿಯ ಸಹೋದರ ತಿಳಿಸಿದ್ದ. ರೋಗಿಯನ್ನು ನಾನು ನೋಡಿದಾಗ ರೋಗಿಗೆ ಪ್ರಜ್ಞೆ ಇರಲಿಲ್ಲ. ಬಿಪಿ ಕಡಿಮೆ ಇತ್ತು. ಆದ್ದರಿಂದ ರೋಗಿಯನ್ನು ಐ.ಸಿ.ಯು. ದಲ್ಲಿ ದಾಖಲು ಮಾಡಿಕೊಂಡಿದ್ದೆವು ಮತ್ತು ಆ ರೋಗಿಯ ಕಂಡಿಷನ್ ತುಂಬಾ ಕಠಿಣ ಇರುತ್ತದೆ ಅಂತ ಹೇಳಿ ಆ ರೋಗಿಯ ಸಹೋದರನಿಗೆ ಮಾಹಿತಿ ನೀಡಿದ್ದೆವು. ರೋಗಿಯ ಸಹೋದರ ಕೊಟ್ಟಂತಹ ಮಾಹಿತಿಗೂ ಮತ್ತು ವಿಷದ ಲಕ್ಷಣಕ್ಕೂ ಹೊಂದಾಣಿಕೆ ಆಗುತ್ತಿತ್ತು. ಇಲಿ ಪಾಷಣ ತೆಗೆದುಕೊಂಡರೆ ಸಾಮಾನ್ಯವಾಗಿ ಬಿ ಪಿ ಕಡಿಮೆ ಆಗುತ್ತದೆ ಮತ್ತು ರೋಗಿ ಪ್ರಜ್ಞೆ ಕಳೆದುಕೊಳ್ಳುತ್ತಾನೆ. ಅದೇ ಲಕ್ಷಣಗಳು ಈ ರೋಗಿಗೂ ಸಹ ಕಂಡು ಬಂದಿದ್ದವು. ಚಿಕಿತ್ಸೆ ಫಲಕಾರಿಯಾಗದೇ ಆ ರೋಗಿ ದಿ.*02.11.2021* ರಂದು ರಾತ್ರಿ *09.30* ರ ಸಮಯಕ್ಕೆ ಮರಣ ಹೊಂದಿದ್ದರು. ನಂತರ ಶವ ಪರೀಕ್ಷೆಯ ಸಲುವಾಗಿ ಆಸ್ಪತ್ರೆಯಲ್ಲಿ ಮುಂದಿನ ಕ್ರಮ ತೆಗೆದುಕೊಂಡಿದ್ದರು. ನಮ್ಮ ಆಸ್ಪತ್ರೆಯ ತುರ್ತು ವಿಭಾಗದ ಕೇಸ್ ಶೀಟ್ ನಲ್ಲಿ ರೋಗಿಯು ಇಲಿಯ ಪಾಷಣದ ಮಾತ್ರೆಗಳನ್ನು ಸಬರ್ ಬಸ್ ಸ್ಟಾಂಡ್ ನ ಲೋಕ ರಂಜನ್ ಮಹಲ್ ರೋಡ್ ರಿಜೆನ್ಸಿ ಥಿಯೇಟರ್ ಎದುರು ಮೈಸೂರು ದಲ್ಲಿ ತೆಗೆದುಕೊಂಡಿರುತ್ತಾರೆ ಅಂತ

ಉಲ್ಲೇಖಿಸಿರುತ್ತಾರೆ. ನನ್ನ ಪ್ರಕಾರ ರೋಗಿ ಇಲಿ ಪಾಷಣದ ಎರಡು ಮಾತ್ರೆಗಳನ್ನು ತೆಗೆದುಕೊಂಡಿದ್ದರಿಂದ ಮರಣ ಹೊಂದಿರುತ್ತಾರೆ.

ಸಾಕ್ಷಿದಾರರು ರೋಗಿಗೆ ಮರಣ ಹೊಂದಿದ ಪೂರ್ವದಲ್ಲಿ ಕೊಟ್ಟಂತಹ ಚಿಕಿತ್ಸೆಯ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳು ಕ್ರಮ ಸಂಖ್ಯೆ *51* ರಿಂದ *61* ರವರೆಗಿನ ಡೆತ್ ಸಮ್ಮರಿ, ಎಮರ್ಜೆನ್ಸಿ ರೂಮ್ ಅಸೆಸ್ಮೆಂಟ್ , ಇನ್-ಪೆಷಂಟ್ ಅಸೆಸ್ಮೆಂಟ್ ರೆಕಾರ್ಡ್, ಕೇಸ್ ಶೀಟ್ ಮತ್ತು ಮೆಡಿಕಲ್ ರೆಕಾರ್ಡ್ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ.*2* ಎಂದು ಗುರುತಿಸಲಾಯಿತು. ಕೆ ಆರ್ ಆಸ್ಪತ್ರೆಯ ಎಮ್ ಎಲ್ ಸಿ ರೆಕಾರ್ಡ್ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ.*3* ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ-</u>

ರೋಗಿ ಇಲಿ ಪಾಷಣ ತೆಗೆದುಕೊಂಡಿದ್ದು ಅಂತ ಹೇಳುವ ಬಗ್ಗೆ ನಮ್ಮ ಆಸ್ಪತ್ರೆಯಲ್ಲಿ ಪರೀಕ್ಷೆ ಒಳಪಡಿಸಿರಲಿಲ್ಲ ಆದರೆ ಕೆ ಆರ್ ಆಸ್ಪತ್ರೆಯಲ್ಲಿ ಅ ಬಗ್ಗೆ ಪರೀಕ್ಷೆ ಆಗಿತ್ತು. ಇಲಿ ಪಾಷಣವನ್ನು ತೆಗೆದುಕೊಂಡರೆ ಸಾವು ಸಂಬವಿಸುತ್ತದೆ. ನಾನು ರೋಗಿಯನ್ನು ಪರೀಕ್ಷಿಸಿದಾಗ ದೇಹದ ಹೊರ ಭಾಗದಲ್ಲಿ ಯಾವುದೇ ಗಾಯಗಳು ಕಂಡುಬಂದಿರಲಿಲ್ಲ ಮತ್ತು ರೋಗಿ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು